# ಸತ್ಯಸ್ವರೂಪ ಶ್ರೀರಾಮಕೃಷ್ಣ

ಪ್ರವ್ರಾಜಿಕಾ
ಆದಿತ್ಯಪ್ರಾಣಾ

ಕೇರಳದ ತ್ರಿಶೂರಿನಲ್ಲಿರುವ ಶ್ರೀಶಾರದಾ ಮಠದಲ್ಲಿ ಸೇವೆ ಸಲ್ಲಿಸುತ್ತಿರುವ ಪೂಜ್ಯ ಮಾತಾಜಿ, ಶ್ರೀರಾಮಕೃಷ್ಣರ ಜೀವನದ ಅತ್ಯಂತ ಪ್ರಮುಖವಾದ ಗುಣವನ್ನು ತಿಳಿಸುತ್ತ ಸ್ವಂತ ಅನುಭವದಿಂದ ಒಂದು ನೈಜ ಘಟನೆಯನ್ನು ಉದಾಹರಣೆಯಾಗಿ ನೀಡಿದ್ದಾರೆ



"ಸತ್ಯಂ ಶಿವಂ ಸುಂದರಂ" ಎಂದು ಭಗವಂತನನ್ನು ಕುರಿತು ವರ್ಣನೆಯಿದೆ. ಸತ್ಯವೆಂದರೆ ಇದ್ದದ್ದನ್ನು ಇದ್ದಂತೆ ಹೇಳುವುದು, ಹೇಳಿದಂತೆ ನಡೆಯುವುದು. ಧರ್ಮ ಜೀವನದ ಮೊದಲ ಹೆಜ್ಜೆಯೇ ಸತ್ಯವನ್ನು ಪಾಲಿಸುವುದು. ಸಂನ್ಯಾಸಿ, ಸಂಸಾರಿ ಎಂಬ ಭೇದವಿಲ್ಲದೆ ಈ ಮೌಲ್ಯವನ್ನು ಎಲ್ಲರೂ, ಎಲ್ಲ ಕಾಲದಲ್ಲಿಯೂ ಪಾಲಿಸಬೇಕು. ಶ್ರೀರಾಮಕೃಷ್ಣರು ಹೇಳುತ್ತಾರೆ, "ಕಲಿಯುಗದಲ್ಲಿ ಸತ್ಯವೇ ತಪಸ್ಸು. ಅದೊಂದನ್ನು ಹಿಡಿದು ಜೀವನದಲ್ಲಿ ಪಾಲಿಸಿದರೆ ಮುಕ್ತನಾಗುವೆ. ಅದರಿಂದಲೇ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು." ಹಾಗಾದರೆ ಈ ಕಲಿಯುಗದಲ್ಲಿ ಅದನ್ನು ಹೇಗೆ ಪಾಲಿಸುವುದು? ಮನೋವಾಕ್ಕಾಯವಾಗಿ ಪ್ರತಿ ಮುಹೂರ್ತದಲ್ಲಿಯೂ ಸತ್ಯವನ್ನು ಹೇಗೆ ಪಾಲಿಸಬೇಕೆಂಬುದನ್ನು ಶ್ರೀರಾಮಕೃಷ್ಣರು ತೋರಿಸಿದ್ದಾರೆ.

ಒಮ್ಮೆ ಪಂಡಿತ ಶಿವನಾಥಶಾಸ್ತ್ರಿಯ ಬಗ್ಗೆ ಶ್ರೀರಾಮಕೃಷ್ಣರು ಹೇಳುತ್ತಾರೆ, "ನನಗೆ ಅವನನ್ನು ಕಂಡರೆ ಬಹಳ ಸಂತೋಷವಾಗುತ್ತದೆ. ಆದರೆ ಅವನು ಕೊಟ್ಟ ಮಾತನ್ನು ಉಳಿಸಿಕೊಳ್ಳುವುದಿಲ್ಲ. ಒಮ್ಮೆ ಇಲ್ಲಿಗೆ ಬರುವೆನೆಂದು ಹೇಳಿದ್ದ, ಬರಲೂ ಇಲ್ಲ, ಬರಲಾಗುವುದಿಲ್ಲವೆಂದು ತಿಳಿಸಲೂ ಇಲ್ಲ. ಅದು ಒಳ್ಳೆಯದಲ್ಲ. ಸತ್ಯದ ಬಗ್ಗೆ ಲಕ್ಷ್ಯ ಕೊಡದಿದ್ದರೆ ನಿಧಾನವಾಗಿ ಎಲ್ಲಾ ನಾಶವಾಗುತ್ತದೆ. ನಾನೇನಾದರೂ, ಒಮ್ಮೆ ದೇವದಾರು ಮರಗಳಿರುವ ಕಡೆಗೆ ಶೌಚಕ್ಕಾಗಿ ಹೋಗುವೆನೆಂದು ಹೇಳಿದರೆ, ನನಗೆ ಶೌಚದ ಆವಶ್ಯಕತೆ ಇಲ್ಲದಿದ್ದರೂ ಅತ್ತ ಹೋಗಿ ಬರಬೇಕಾಗುತ್ತದೆ! ಹಾಗಿಲ್ಲದಿದ್ದರೆ ಸತ್ಯನಿಷ್ಠೆಯ ಬಗ್ಗೆ ಇರುವ ಪ್ರೀತಿಯನ್ನು ಕಳೆದುಕೊಳ್ಳುವೆನೆಂಬ ಶಂಕೆಯುಂಟಾಗುತ್ತದೆ."

ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಸತ್ಯಕಾಮ ಜಾಬಾಲನ ಪ್ರಸಂಗ ಇಲ್ಲಿ ಉಲ್ಲೇಖನೀಯ. ಸಣ್ಣ ಬಾಲಕ ಸತ್ಯಕಾಮ ಜಾಬಾಲನಿಗೆ ಗುರುಕುಲದಲ್ಲಿ ಬ್ರಹ್ಮಚರ್ಯಾಶ್ರಮದಲ್ಲಿ ಇದ್ದುಕೊಂಡು ವಿದ್ಯೆ ಕಲಿಯುವ ಆಸೆ. ಅದಕ್ಕೆ ಗುರುಕುಲಕ್ಕೆ ಹೋಗಬೇಕು, ಗುರುಗಳು ತನ್ನ ವಂಶದ ಗೋತ್ರ ಕೇಳುತ್ತಾರೆ ಎಂದರಿತ ಅವನು ಅದರ ಬಗ್ಗೆ ತಾಯಿಯನ್ನು ಪ್ರಶ್ನಿಸುತ್ತಾನೆ. ತಾಯಿಗೆ ಅದರ ಅರಿವು ಇರುವುದಿಲ್ಲ. ಅವಳು "ಮಗೂ, ಚಿಕ್ಕಂದಿನಲ್ಲಿ ನಿನ್ನನ್ನು ನಾನು ಹೆಡೆದೆನು; ನಿನ್ನ ತಂದೆಯು ಬೇಗನೆ ಕಾಲವಾದರು. ಆದ್ದರಿಂದ ನನಗೆ ಗೋತ್ರವು ನೆನಪಿಲ್ಲ. ನನ್ನ ಹೆಸರು ಜಬಾಲಾ. ನಿನ್ನ ಹೆಸರು ಸತ್ಯಕಾಮ. ಆದ್ದರಿಂದ ನಿನ್ನ ಪೂರ್ಣ ಹೆಸರು ಸತ್ಯಕಾಮ ಜಾಬಾಲ. ಇದನ್ನೇ ನಿನ್ನ ಗುರುಗಳಿಗೆ ಹೇಳು" ಎನ್ನುತ್ತಾಳೆ. ಸತ್ಯಕಾಮ, ಹಾರಿದ್ರುಮತ ಗೌತಮ ಎಂಬ ಗುರುಗಳ ಹತ್ತಿರ ಬರುತ್ತಾನೆ. ಅವರು ಅವನ ಗೋತ್ರದ ಬಗ್ಗೆ ವಿಚಾರಿಸುತ್ತಾರೆ. ಸತ್ಯಕಾಮ ತನ್ನ ತಾಯಿ ಹೇಳಿಕೊಟ್ಟಿದ್ದನ್ನಷ್ಟೆ ಗುರುಗಳ ಮುಂದೆ ಹೇಳುತ್ತಾನೆ. ಆಗ ಗುರುಗಳಿಗೆ ಸಂತೋಷವಾಗುತ್ತದೆ, "ಬ್ರಾಹ್ಮಣನಲ್ಲದವನು ಹೀಗೆ ಹೇಳಲಾರನು. ಮಗೂ, ಸಮಿತ್ತನ್ನು ತೆಗೆದುಕೊಂಡು ಬಾ! ನಿನಗೆ ಉಪನಯನವನ್ನು ಮಾಡಿಸುವೆನು. ನೀನು ಸತ್ಯನಿಷ್ಠನಾಗಿ ನಡೆದುಕೊಂಡಿದ್ದೀಯೆ" ಎನ್ನುತ್ತಾರೆ.

**"ಶ್ರೀರಾಮಕೃಷ್ಣರ ಬಾಲ್ಯಕಾಲದಲ್ಲಿ ಒಂದು ಹೊಸತನವಿತ್ತು. ಅಗಾಧ ಶ್ರದ್ಧೆ, ಅಪಾರ ಸರಳತೆ, ಅನಂತ ಸತ್ಯಪ್ರೇಮ ಇವು ಯಾವಾಗಲೂ ಅವರ ಮನಸ್ಸಿನಲ್ಲಿದ್ದವು"** ಎಂದು ಸ್ವಾಮಿ **ಶಾರದಾನಂದರು ಶ್ರೀರಾಮಕೃಷ್ಣ ಲೀಲಾಪ್ರಸಂಗ ಗ್ರಂಥದಲ್ಲಿ ವಿವರಿಸಿದ್ದಾರೆ. ಇದಕ್ಕೆ ಪೂರಕವಾಗಿಯೇ ಇದೆ, ಅವರು ಉಪ ನಯನದ ಸಮಯದಲ್ಲಿ ತಾನು ಕೊಟ್ಟ ಮಾತಿನಂತೆ ಧನಿ ಕಾಮಾರಿಣಿಯ ಕೈಯಲ್ಲಿ ಭಿಕ್ಷೆ ಪಡೆದ ಘಟನೆ.**

ಶ್ರೀರಾಮಕೃಷ್ಣರು ಯಾವ ಗ್ರಂಥಗಳನ್ನು ಓದದಿದ್ದರೂ ಬಾಹ್ಯ ಜಗತ್ತಿನ ಅನುಭವದಿಂದ ಅವರ ಇಂದ್ರಿಯಗಳು ಬಹು ಬೇಗನೆ ಪಕ್ವಗೊಂಡಿದ್ದವು. "ನಾನು ಯಾವುದನ್ನೇ ಆದರೂ ಸರಿಯಾಗಿ ವಿಮರ್ಶಿಸಿ ಸತ್ಯವೆಂದು ಸ್ವೀಕರಿಸುತ್ತೇನೆ. ಅದು ಪ್ರಮಾಣಿತವಾದರೆ ಅದನ್ನು ಕಾರ್ಯರೂಪಕ್ಕೆ ತರುತ್ತೇನೆ. ಈ ಪ್ರಪಂಚದಲ್ಲಿ ಅಸತ್ಯವಲ್ಲದ ಯಾವುದನ್ನೂ ನಾನು ಕಡೆಗಣಿಸು ವುದಿಲ್ಲ" (ಲೀಲಾಪ್ರಸಂಗ, ೨ನೇ ಭಾಗ, ಪು ೨೧೨). ಎಂಬುದು ಅವರ ಮೂಲಮಂತ್ರವಾಗಿತ್ತು.

ಶ್ರೀರಾಮಕೃಷ್ಣರು ಹರಿಶ್ಚಂದ್ರನ ಕಥೆಯನ್ನು ಕೇಳಿದಾಗ ಕಣ್ಣೀರು ಸುರಿಸುತ್ತಾರೆ. ರಾಜನಾಗಿ ಮೆರೆದು ಸ್ಮಶಾನವಾಸಿ ಯಾದ ಹರಿಶ್ಚಂದ್ರನ ಪರಿಸ್ಥಿತಿಯನ್ನು ಒಮ್ಮೆ ಚಿಂತಿಸಿ ನೋಡಿ! ಸತ್ಯದ ಹಾದಿ ಹಿಡಿದವರ ಗತಿಯೇ ಹೀಗೆನ್ನುವಿರಾ? ಇವರೇ ನಿಜವಾದ ಧೀರರು. ಈ ಸತ್ಯಮಾರ್ಗದಿಂದಲೇ ಉನ್ನತವಾದ ಸತ್ಯಸಾಕ್ಷಾತ್ಕಾರವೆಂದು ಅವರಿಗೆ ತಿಳಿದಿದೆ. ಆದ್ದರಿಂದಲೇ ಯಾವ ಕಷ್ಟ ಸಂಕಟಗಳಿಗೂ ಹೆದರದೆ ಸತ್ಯ ಎಲ್ಲಿಗೆ ಕೊಂಡೊಯ್ಯುವುದೋ ಅಲ್ಲಿಗೆ ಹೋಗಲು ಸಿದ್ಧರಾದ ಪ್ರಸಿದ್ಧ ರಿವರು. ಇದು ಹಿಂದಿನ ಪುರಾಣ; ಈಗ ಸಾಧ್ಯವೇ ಎನ್ನು ವಿರೇನು?

ಶ್ರೀರಾಮಕೃಷ್ಣರ ತಂದೆ ಕ್ಷುದಿರಾಮರು ಸತ್ಯವನ್ನು ಹೇಗೆ ತಮ್ಮ ಜೀವನದಲ್ಲಿ ಪಾಲಿಸಿದರೆಂಬುದನ್ನು ಗಮನಿಸಿ. ಗ್ರಾಮದ ಜಮೀನ್ದಾರ ರಮಾನಂದನು ತನ್ನ ಪರವಾಗಿ ಸಾಕ್ಷಿ ನೀಡ ಲೊಪ್ಪದ ಕ್ಷುದಿರಾಮರ ಎಲ್ಲಾ ಆಸ್ತಿಯನ್ನು ವಶಪಡಿಸಿಕೊಂಡು ಅವರನ್ನು ನಿರ್ಗತಿಕರನ್ನಾಗಿ ಮಾಡಿದ. ಅವರು ಸ್ವಗ್ರಾಮವನ್ನು ಬಿಡಬೇಕಾಯಿತು. ಜಮೀನ್ದಾರನಿಗೆ ಹೆದರಿ ಊರಿನವರೂ ಕೂಡ ಸಹಾಯ ಮಾಡಲು ಹೆದರಿದರು. ಒಂದು ಕ್ಷಣಾರ್ಧ ದಲ್ಲಿ ಆಸ್ತಿ ಮಾಯವಾಯಿತು. ಆದರೆ ಈ ಬಡತನದ ಸ್ಥಿತಿ ಅವರನ್ನು ಧರ್ಮಮಾರ್ಗದಿಂದ ಹಿಂದೆ ಎಳೆಯಲು ಸಾಧ್ಯ ವಾಗಲಿಲ್ಲ. ಇಷ್ಟದೈವವಾದ ಶ್ರೀರಾಮಚಂದ್ರನಲ್ಲಿ ಮನಸ್ಸಿಟ್ಟು, ಸತ್ಯಮಾರ್ಗವನ್ನೇ ಹಿಡಿದು ಆ ಗ್ರಾಮದಿಂದ ಹೊರಟರು. ಕಾಮಾರಪುಕುರದಲ್ಲಿದ್ದ ಇವರ ಸ್ನೇಹಿತ ಸುಖಲಾಲ ಗೋಸ್ವಾಮಿ ಇವರನ್ನು ಬರಮಾಡಿಕೊಂಡು ಆಶ್ರಯ ಕೊಟ್ಟ. ಅಂತಹ ತಂದೆಯ ಮಗನಾಗಿ ಹುಟ್ಟಿದವರು ಶ್ರೀರಾಮಕೃಷ್ಣರು.

ಒಮ್ಮೆ ದಕ್ಷಿಣೇಶ್ವರದ ಹತ್ತಿರವಿರುವ ಉದ್ಯಾನದ ಮನೆ ಯಲ್ಲಿ ವಾಸವಾಗಿದ್ದ ಜದು ಮಲ್ಲಿಕನಿಗೆ ಶ್ರೀರಾಮಕೃಷ್ಣರು "ನಾನು ಇಂದು ನಿನ್ನ ಮನೆಗೆ ಬರುವೆ" ಎಂದು ಹೇಳಿದ್ದರು. ಅವರಿಗೆ ಕೊಟ್ಟ ಮಾತು ನೆನಪಾದದ್ದು ನಡುರಾತ್ರಿಯಲ್ಲಿ. ಅವರು ಆ ಕ್ಷಣವೇ ಎದ್ದು ಅವನ ಉದ್ಯಾನದವರೆಗೆ ಹೋಗಿ ಮನೆ ಕಾಯುವವನನ್ನು ಕರೆದು, ಮುಖ್ಯದ್ವಾರವನ್ನು ತೆಗೆಸಿ ಒಳಗೆ ಕಾಲಿಟ್ಟು, ಆ ಹೊತ್ತಿನಲ್ಲಿ ಅವರಿಗೆ ತೊಂದರೆ ಕೊಡ ಬಾರದೆಂದು ತಮ್ಮ ಕೊಠಡಿಗೆ ಮರಳಿ ಬಂದರು. ತ್ರಿಕಾಲದಲ್ಲೂ ಸತ್ಯವಾದುದು ಮಾತ್ರ ಶಾಶ್ವತ. ಭಗವಂತನೊಬ್ಬನೇ ನಿತ್ಯಸತ್ಯ, ಶಾಶ್ವತವಾದ್ದರಿಂದ ಅವನ ಸಾಕ್ಷಾತ್ಕಾರವೇ ಜೀವನದ ಗುರಿ. ಎಷ್ಟು ಜನ್ಮವೆತ್ತಿದರೂ ಕೊನೆಗೆ ಅವನನ್ನೇ ತಲುಪಬೇಕು. ನಡೆನುಡಿಯಲ್ಲಿನ ಸತ್ಯವನ್ನೇ ಹಿಡಿದು ಪರಮ ಸತ್ಯದ ಕಡೆಗೆ ಹೋಗಬೇಕಾದುದರಿಂದ ಪ್ರತಿಯೊಂದು ಕ್ಷಣದಲ್ಲೂ ಎಚ್ಚರ ದಿಂದಿರಬೇಕೆಂದು ರಾಮಕೃಷ್ಣರು ತಮ್ಮ ಜೀವನದ ಈ ಉದಾಹರಣೆಯನ್ನು ನಮ್ಮ ಮುಂದಿಟ್ಟಿದ್ದಾರೆ. ತಿಳಿದೂ ತಿಳಿದೂ ಅಧರ್ಮವನ್ನೇ ಅವಲಂಬಿಸಿದ್ದ ದುರ್ಯೋಧನನು ಯುದ್ಧಕ್ಕೆ ಮುನ್ನ ತಾಯಿ ಗಾಂಧಾರಿಯ ಆಶೀರ್ವಾದವನ್ನು ಪಡೆಯ ಬಂದಾಗ **ಯತೋ ಧರ್ಮಸ್ತತೋ ಜಯಃ** (ಧರ್ಮ ಇರುವಲ್ಲೇ ಜಯವೂ ಇರುತ್ತದೆ) ಎಂದು ಆಕೆ ಹರಸುತ್ತಾಳೆ. ತನ್ಮೂಲಕ ಸೂಕ್ಷ್ಮವಾಗಿ ಸತ್ಯಕ್ಕೇ ಜಯವೆಂದು ತಿಳಿಸುತ್ತಾಳೆ. ಆದರೆ ಕೇಳುವ ಸೂಕ್ಷ್ಮತೆ ದುರ್ಯೋಧನನಿಗಿರಲಿಲ್ಲ. ಮುಂಡಕ ಉಪನಿಷತ್ (೩.೧.೬) ಹೇಳುತ್ತದೆ:

ಸತ್ಯಮೇವ ಜಯತೇ ನಾನೃತಂ
ಸತ್ಯೇನ ಪಂಥಾ ವಿತತೋ ದೇವಯಾನಃ ।
ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ
ಯತ್ರ ತತ್ಸತ್ಯಸ್ಯ ಪರಮಂ ನಿಧಾನಂ ॥

"ಸತ್ಯಕ್ಕೆ ಮಾತ್ರವೇ ಜಯ, ಅಸತ್ಯಕ್ಕಲ್ಲ. ಯಾರು ಸತ್ಯವನ್ನು ಪರಿಪಾಲಿಸುತ್ತಿರುವರೋ ಆ ಮಾರ್ಗವು ದೇವಯಾನವು. ಆಸೆಗಳಿಲ್ಲದವರು ಸತ್ಯದ ಮೂಲಕ ಮೇಲೇರಿ ಪರಮ ಶ್ರೇಷ್ಠವೂ ಶಾಶ್ವತವೂ ಆದ ಸ್ಥಾನವನ್ನು ಪಡೆಯುವರು."

ಶ್ರೀರಾಮಕೃಷ್ಣರು ಕಾಳಿಯ ದರ್ಶನ ಪಡೆದ ನಂತರ ಒಂದು ಹೂವನ್ನು ಹಿಡಿದು ಪ್ರಾರ್ಥಿಸಿ ಹೇಳುತ್ತಾರೆ: "ತಾಯಿ, ಇದೋ ತೆಗೆದುಕೊ ನಿನ್ನ ಜ್ಞಾನವನ್ನು, ಇದೋ ತೆಗೆದುಕೋ ನಿನ್ನ ಅಜ್ಞಾನವನ್ನು. ನನಗೆ ಶುದ್ಧ ಭಕ್ತಿಯನ್ನು ಕೊಡು." ಹೀಗೆ ಎಲ್ಲಾ ದ್ವಂದ್ವಗಳನ್ನೂ ಅವರು ತಾಯಿಯ ಪಾದದಲ್ಲಿ ಅರ್ಪಿಸಿದರು. ಆದರೆ "ಇದೋ ತೆಗೆದುಕೊ ನಿನ್ನ ಸತ್ಯವನ್ನು ಮತ್ತು ನಿನ್ನ ಅಸತ್ಯವನ್ನು" ಎಂದು ಹೇಳಲು ಅವರಿಗೆ ಸಾಧ್ಯ

ಹೋಗಲಿಲ್ಲ. ಕಾರಣ ಸತ್ಯವೇ ದೇವರೆಂದು ಅವರು ತಿಳಿದಿದ್ದರು. ಸತ್ಯ ಒಂದೇ. ಎರಡಲ್ಲ. ಅದನ್ನು ಅರ್ಪಿಸಿಬಿಟ್ಟರೆ ಪ್ರಪಂಚದಲ್ಲಿ ಯಾವುದನ್ನು ಹಿಡಿದು ನಿಲ್ಲುವುದು? "ಸತ್ಯವು ಒಂದೇ. ಎಲ್ಲಾ ಮಾರ್ಗಗಳೂ ಆ ಪರಬ್ರಹ್ಮನಲ್ಲಿ ಲೀನವಾಗುವುವು" ಎಂದು ಅವರು ಹೇಳುತ್ತಿದ್ದರು.

ಸತ್ಯದ ಸ್ವರೂಪವಾದ ಪರಬ್ರಹ್ಮವನ್ನು, ನಮ್ಮ ನಿಜಸ್ವರೂಪವನ್ನು ಮಾಯೆಯು ನಮ್ಮಿಂದ ಮುಚ್ಚಿಟ್ಟು ಅನುಭವಕ್ಕೆ ಕಾಣದಂತೆ ಮಾಡಿದೆ. ಬ್ರಹ್ಮಜ್ಞಾನವು ಮೂಢನಂಬಿಕೆಯಿಂದ ಉತ್ಪನ್ನವಾಗಲಾರದು, ನಿತ್ಯಾನಿತ್ಯ ವಿಚಾರ ಮತ್ತು ಸಾಧನೆಯಿಂದಲೇ ಉತ್ಪನ್ನವಾಗಬೇಕು. ಅರಿವಿನಲ್ಲಿ ಪರ್ಯವಸಾನವಾಗುವ ಜ್ಞಾನವೇ ಸಾಧನೆಯ ಗುರಿ. ಬ್ರಹ್ಮಜ್ಞಾನವೇ ಪುರುಷಾರ್ಥ. ಏಕೆಂದರೆ ಸಂಸಾರಕ್ಕೆ ಮೂಲವಾಗಿರುವ ಅವಿದ್ಯೆ ಮೊದಲಾದ ಅನರ್ಥಗಳನ್ನು ಅದು ನಿಶ್ಶೇಷವಾಗಿ ನಾಶಮಾಡುತ್ತದೆ.

ಸತ್ಯಸಾಕ್ಷಾತ್ಕಾರದ ಮಾರ್ಗವನ್ನು ಶ್ರೀರಾಮಕೃಷ್ಣರೇ ತಮ್ಮ ಜೀವನದಲ್ಲಿ ನಡೆದು ತೋರಿಸಿದ್ದಾರೆ. ಅವರ ಒಂದೊಂದು ಹೆಜ್ಜೆಯ ಗುರುತೂ ನಮಗಾಗಿಯೇ ಇದೆ. ಇಂದಿನ ಪರಿಸ್ಥಿತಿಯಲ್ಲಿ ಇದೆಲ್ಲ ಸಾಧ್ಯವಿಲ್ಲವೆಂದು ಅಲ್ಲಗಳೆಯುವವರಿಗೆ ಒಂದು ಘಟನೆಯನ್ನು ತಿಳಿಸಬಹುದು. ಇದೇ ನಲವತ್ತು ವರ್ಷಗಳ ಹಿಂದೆ ತುಮಕೂರಿನ ಬಳಿ ಒಂದು ಪುಟ್ಟ ಗ್ರಾಮದ ಬುಡ್ಡತಿಮ್ಮಯ್ಯ ಎಂಬುವರು ಪ್ರೈಮರಿ ಶಾಲೆಯ ಉಪಾಧ್ಯಾಯರಾಗಿದ್ದರು. ಅವರನ್ನು ಎಲ್ಲರೂ ಪ್ರೀತಿಯಿಂದ ಮೇಷ್ಟರೆಂದೇ ಕರೆಯುತ್ತಿದ್ದರು. ಅವರು ಒಮ್ಮೆ ತಮ್ಮ ದಾಯಾದಿ ಸಂಜೀವಯ್ಯನ ಬಳಿ ಸ್ವಲ್ಪ ಹಣವನ್ನು ಸಾಲವಾಗಿ ಪಡೆದು ಸಾಲಪತ್ರವನ್ನು ಬರೆದುಕೊಟ್ಟಿದ್ದರು. ಮೇಷ್ಟರು ಕೆಲವು ದಿನಗಳ ನಂತರ ಹಣ ಹಿಂದಿರುಗಿಸಿ ಬಂದರು; ಪತ್ರವನ್ನು ವಾಪಸ್ ಪಡೆಯಲು ಮರೆತರು. ಕೆಲವು ಕಾಲದ ನಂತರ ಸಂಜೀವಯ್ಯನು ಆ ಪತ್ರವನ್ನು ಕೋರ್ಟಿಗೆ ದಾಖಲು ಮಾಡಿ 'ನನ್ನ ಹಣ ಸಿಗಲಿಲ್ಲ" ಎಂದು ಸುಳ್ಳು ಮೊಕದ್ದಮೆ ಹೂಡಿದ. ಅಮಾಯಕ ಮೇಷ್ಟರು ಕೋರ್ಟಿನ ಬಳಿ ಹೋದರು. ಅಲ್ಲಿ ಸಂಜೀವಯ್ಯನನ್ನು ಕರೆದು, "ನಾನು ಹಣ ವಾಪಸ್ ಮಾಡಿರುವೆ. ನೀನು ಈ ಕೋರ್ಟಿನ ಮುಂದಿರುವ ಬಸವಣ್ಣನನ್ನು ಮೂರು ಸುತ್ತು ಬಂದು ನಮಸ್ಕರಿಸಿ, ನನ್ನ ಹಣ ವಾಪಸ್ ಬಂದಿಲ್ಲವೆಂದು ಹೇಳುವೆಯಾದರೆ ನೀನು ಕೇಳಿದ್ದನ್ನು ಕೊಡುವೆ. ನಾನು ಕೋರ್ಟಿನ ಮೆಟ್ಟಿಲನ್ನು ಹತ್ತುವುದಿಲ್ಲ" ಎಂದರು. ಸಂಜೀವಯ್ಯನು ಅದೇ ರೀತಿ ಮೂರು ಸುತ್ತು ಬಂದು "ಹಣ ಕೊಟ್ಟಿಲ್ಲ, ತನಗೆ ಸಿಗಲಿಲ್ಲ"ವೆಂದ. ನಂತರ ಮೇಷ್ಟರಿಗೆ ನಿಲ್ಲಲು ಮನೆಯನ್ನೂ ಬಿಡದೆ ಎಲ್ಲಾ ಕಸಿದುಕೊಂಡು ಊರನ್ನು ಬಿಡುವ ಪರಿಸ್ಥಿತಿಗೆ ತಂದೊಡ್ಡಿದ.

ಧೀರನಾದ ಒಬ್ಬ ರೈತಬಂಧು ತನ್ನ ಜಮೀನಿನಲ್ಲಿ ಗುಡಿಸಿಲು ಕಟ್ಟಿಸಿಕೊಂಡು ಜೀವಿಸಲು ಮೇಷ್ಟರಿಗೆ ತಿಳಿಸಿದ. ತಮ್ಮ ಏಳು ಜನ ಹೆಣ್ಣುಮಕ್ಕಳು, ಒಬ್ಬ ಮಗ ಮತ್ತು ಹೆಂಡತಿಯೊಡನೆ ಆ ಗುಡಿಸಿಲಿನಲ್ಲಿ ಮೇಷ್ಟರು ಇರತೊಡಗಿದರು. ತಮಗೆ ಬರುತ್ತಿದ್ದ ಸ್ವಲ್ಪ ಸಂಬಳದಲ್ಲಿ ಶಾಲೆಯಿಂದ ಬರುವಾಗ ಪ್ರತಿದಿನ ಒಂದೊಂದು ಮೂಟೆ ಕಡಲೆಪುರಿಯನ್ನು ತಂದು, ಮಕ್ಕಳನ್ನು ಸಾಕತೊಡಗಿದರು. ಕೆಲವು ಕಾಲದ ನಂತರ ಸಂಜೀವಯ್ಯನ ಶರೀರವೆಲ್ಲ ಹುಣ್ಣಾಗಿ, ರಕ್ತ, ಕೀವು, ಹುಳುಗಳು ಹೊರಬರಲಾರಂಭಿಸಿತು. ಅದರ ವಾಸನೆಯನ್ನು ತಾಳಲಾರದೆ ಅವನ ಮಕ್ಕಳು ಅವನಿಗೆ ಮನೆಯ ತುಸು ದೂರದಲ್ಲಿ ಒಂದು ಗುಡಿಸಿಲು ಕಟ್ಟಿ ದೂರವಿಟ್ಟರು. ಕೆಲವು ಸಮಯದ ನಂತರ ಅವನು ಪ್ರಾಣಬಿಟ್ಟ. ಅವನ ಮಕ್ಕಳು ಮೇಷ್ಟರ ಬಳಿ ಬಂದು "ನಮ್ಮ ತಂದೆ ಮಾಡಿದ ಅನ್ಯಾಯಕ್ಕೆ ಅವರು ಪಟ್ಟ ಕಷ್ಟಸಂಕಟಗಳನ್ನು ನೋಡಿ ನಮಗೆ ಸಾಕಾಯಿತು. ನಿಮ್ಮ ಆಸ್ತಿ, ಮನೆಯೆಲ್ಲವನ್ನು ವಾಪಸ್ ತೆಗೆದುಕೊಳ್ಳಿ" ಎಂದು ಬೇಡಿಕೊಂಡು ಅವರ ಆಸ್ತಿಯೆಲ್ಲವನ್ನೂ ಮರಳಿ ಕೊಟ್ಟರು. ಊರಿನ ಜನರು ಯಾವುದೇ ನ್ಯಾಯಕ್ಕಾದರೂ ಆ ಮೇಷ್ಟರನ್ನು ಕರೆಯದೆ ಇರುತ್ತಿರಲಿಲ್ಲ. ತಮ್ಮ ಏಳು ಜನ ಹೆಣ್ಣು ಮಕ್ಕಳಿಗೂ ಮದುವೆ ಮಾಡಿಸಿ ಮಗನಿಗೂ ಮುಂಜಿ ಮಾಡಿಸಿದ ನಂತರವೇ ಅವರು ಪ್ರಾಣಬಿಟ್ಟರು. ಈ ಘಟನೆ ಈ ಗಳಿಗೆಯಲ್ಲಿಯೂ ಸತ್ಯಮಾರ್ಗದಲ್ಲಿ ನಡೆಯುವವರಿದ್ದಾರೆ ಎಂಬುದನ್ನು ತೋರಿಸುತ್ತದೆ.

ಗಾಂಧೀಜಿಯವರ ಇಡೀ ಜೀವನವೇ ಸತ್ಯಮಾರ್ಗದಲ್ಲಿ ನಡೆದು ಬದುಕುವುದಕ್ಕೆ ಇನ್ನೊಂದು ಸಾಕ್ಷಿ. ಸತ್ಯಮಾರ್ಗವು ನಮ್ಮನ್ನು ಧೀರರನ್ನಾಗಿಯೂ, ನಿರ್ಭಯರನ್ನಾಗಿಯೂ, ನಿಷ್ಕಳಂಕರನ್ನಾಗಿಯೂ ಮಾಡಿ ಜೀವನವನ್ನು ಧೈರ್ಯವಾಗಿ ಎದುರಿಸುವ ಶಕ್ತಿಯನ್ನು ಕೊಡುತ್ತದೆ.

### "ನೀನು ಬೇರೆ, ಶ್ರೀರಾಮಕೃಷ್ಣರು ಬೇರೆಯೇ?"

ಒಂದು ದಿನ ಶರಚ್ಚಂದ್ರ ಚಕ್ರವರ್ತಿಯು ತನ್ನ ಗುರು ಸ್ವಾಮಿ ವಿವೇಕಾನಂದರನ್ನು ಅವರನ್ನು ಪೂಜಿಸಲು ಬೇಡಿದನು. ಅವನ ಒತ್ತಾಯಕ್ಕೆ ಸ್ವಾಮಿಜಿ ಮಣಿಯಬೇಕಾಯಿತು. ಪೂಜೆ ಮುಗಿದ ಮೇಲೆ ಸ್ವಾಮಿಜಿ ಶಿಷ್ಯನಿಗೆ ಹೇಳಿದರು, "ನಿನ್ನ ಪೂಜೆಯೇನೋ ಮುಗಿಯಿತು. ನೀನು ಶ್ರೀರಾಮಕೃಷ್ಣರ ಪೂಜೆಗೆಂದು ಸಿದ್ಧಗೊಳಿಸಿ ತಟ್ಟೆಯಲ್ಲಿದ್ದ ಹೂಗಳಿಂದ ನನ್ನ ಪಾದಪೂಜೆ ಮಾಡಿ ಅದನ್ನು ಅಪವಿತ್ರಗೊಳಿಸಿದ್ದಕ್ಕೆ ಗುರು ಮಹಾರಾಜರ ಪೂಜೆ ಮಾಡುವ ಸ್ವಾಮಿ ಪ್ರೇಮಾನಂದರಿಗೆ ಕೋಪ ಬರುತ್ತದೆ" ಎನ್ನುವಷ್ಟರಲ್ಲಿ ಪ್ರೇಮಾನಂದರು ಅಲ್ಲಿಗೆ ಬಂದೇಬಿಟ್ಟರು. ಸ್ವಾಮಿಜಿ ಅವರತ್ತ ತಿರುಗಿ, "ನೋಡು, ಇವನೆಂಥ ಕೆಲಸ ಮಾಡಿ ಬಿಟ್ಟಿದ್ದಾನೆ! ಶ್ರೀರಾಮಕೃಷ್ಣರ ಪೂಜೆಗೆಂದು ಇಟ್ಟಿದ್ದ ಹೂಗಳಿಂದ ನನ್ನನ್ನು ಪೂಜಿಸಿದ್ದಾನೆ!" ಎಂದರು. ಅದಕ್ಕೆ ಪ್ರೇಮಾನಂದರು ನಗುತ್ತ ಹೇಳಿದರು: "ಒಳ್ಳೆಯದೇ ಆಯಿತು! ನೀನು ಬೇರೆ, ಶ್ರೀರಾಮಕೃಷ್ಣರು ಬೇರೆಯೇ?"